ಅಲ್ಲೂರು ವೆಂಕಟರಾಯರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ಸ್ಥಾಪಿಸುವ ಬಗ್ಗೆ

೨೪೭ ಶ್ರೀ ಮಲ್ಲಪ್ಪ (ಹರಿಹರ).— ಯುವಜನ ಸೇವೆಗಳು ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ?

ಕರ್ನಾಟಕ ಪಿತಾಮಹ ದಿವಂಗತ ಅಲೂರು ವೆಂಕಟರಾಯರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ಮುಂಬರುವ ಕನ್ನಡ ರಾಜ್ಯೋತ್ಸವದ ವೇಳೆಗೆ ಪ್ರತಿಷ್ಠಾಪನೆಯನ್ನು ಸರಕಾರದವರಂ ಮಾಡುವರೆ ?

ANNOUNCEMENT

MR. SPEAKER.—I have received the following message from the Chairman, Legislative Council as required under Rule 114 of the Rules of Procedure and conduct of Business in Karnataka Legislative Conncil.

> "I send herewith the Karnataka Appopriation Bill (No.2), 1983 which has been agreed to by the Legislative Council on 24 September 1983 without amendments."

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಸ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನ ಮುಂದೆ ನಮೂದಿಸಿರತಕ್ಕಂಥ CADA ತುಂಗಭದ್ರ ಪ್ರೊಜೆಕ್ಟ್, ಮುನಿರಾಬಾದ್, ಮಲಪ್ರಭ ಮತ್ತು ಘಟಪ್ರಭ ಪ್ರಾಜೆಕ್ಟ್, ಬೆಳಗಾವಿ ಕಾವೇರಿ ಬೇಸಿನ್ ಪ್ರಾಜೆಕ್ಟ್, ಮೈಸೂರು, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್, ಭೀಮರಾಯನ ಗಂಡಿ ಮತ್ತು ಭದ್ರಾ ಪ್ರಾಜೆಕ್ಟ್, ಶಿವಮೊಗ್ಗ, ಇದರ ೮೨-೮೩ರ ಆಡಳಿತ ವರದಿಯನ್ನು ಸಭೆಯ ಮುಂದಿಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ.

SRI LAKSHMISAGAR (Minister for law & Parliamentary Affairs) on behalf of Sri S. R. Bommai, (Minister for Industries). I lay, the 17th Annual Report and Accounts of NGEF Ltd., for the year 1981-82, as required under Section 619 (A) of the Companies Act, 1956.

SRI A LAKSHMISAGAR (Minister for law and Parliamentary Affairs on behalf of Sri B. Rachaiah. Minister for Education), I lay,

The Annual Report of the University of Mysore for the year 1981-82.

As required under Section 45 (2) of the Karnataka State Universities Act, 1976.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನಲ್ಲಿರತಕ್ಕಂಥ ಕಾಗದ ಪತ್ರಗಳನ್ನು ಸಭೆಯ ಮುಂದಿಡಬಯಸುತ್ತೇನೆ.

(a) Notification No. RD 50 TRM 83 dated 13 September 1983. Remission of land revenue in respect of 4 villages of Harapanahalli taluk for the year 1982-83.

(b) Notification No RD 60 TRM 83 dated 15th September 1983 Remission of land revenue in respect of 80 villages of Deodurg taluk for the year 1982-83.

(c) Notification No. RD 32 TKM dated 15th September 1983 Remission of land revenue in respect of 8 villages of Channagiri taluk for the year. 1982-83.

(d) Notification No. RD 49 TRM Dated 20th September 1983 Remission of land revenue in respect of 72 villages of Kudligi taluk for the year 1982-83, as required under Sub-section (2) of Section 194 of the Karnataka Land Revenue Act, 1964.

SRI A. LAKSHMISAGAR (Minister for Law & Parliamentary Affairs on behalf of Sri M. P. Prakash (Minister of State of Transport). I lay

Notification No. HD 154 TMT 83 dated 30th June, 1983

Rate of tax leviable in respect of certain vehicles during the year commencing from 1-1-1983 and ending 31-12-1983

As required under Section 4 of the Karnataka Motor Vehicles Taxation (Amendment) Act, 1983.

MR. SPEAKR.—Papers laid.

ಮನವಿಗಳು

ಶ್ರೀ ಎಂ. ಎಸ್.—ಮಾನ್ಯ ಅಧ್ಯಕ್ಷರೇ ನಾನು ೬-೭ ಸಾರಿ ಎದ್ದು ನಿಂತಿದ್ದೇನೆ. ಚೋಳ ನಾಯಕನಹಳ್ಳಿ ಬಗ್ಗೆ ಶಿಕ್ಷಣ ನಿಯಮದ ಕೆಳಗೆ ನೋಟೀಸ್ ಕಳುಹಿಸಿಕೊಟ್ಟಿದ್ದೆ. ಮಾನ್ಯ ತಹಸೀಲ್ದಾರರು ಉತ್ತರ ಕೊಡುವುದಕ್ಕೆ ತಯಾರಾಗಿದ್ದರು. ತಯಾರಾಗಿದ್ದರೂ ಏತಕ್ಕೋ ಏನೋ ಉತ್ತರ ಬರುತ್ತಿಲ್ಲ. ಏತಕ್ಕೆಂದರೆ ಹರಿಜನರ ವಿಷಯ.

ಅಧ್ಯಕ್ಷರು —ಉತ್ತರ ಕೊಡುವುದಕ್ಕೆ ತಯಾರಾಗಿದ್ದರೆ ನನ್ನದೇನೂ ಇಲ್ಲ. ಇದಾದ ಮೇಲೆ ಅದನ್ನು ತೆಗೆದುಕೊಳ್ಳೋಣ.

12-00 ಮಧ್ಯಾಹ್ನ

ಶ್ರೀ ಬಿ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನಡೆಯುತ್ತಿದ್ದ ಒಂದು ಶಾಲೆ ನಿಂತುಹೋಗಿರುವ ಬಗ್ಗೆ ಒಂದು ಗಮನಸೆಳೆಯುವ ಸೂಚನೆ ಕಳುಹಿಸಿದ್ದೆ.

ಅಧ್ಯಕ್ಷರು.—ಬ್ಯಾಲೆಟ್‌ನಲ್ಲಿ ಅದು ಇನ್ನೂ ಬಂದಿಲ್ಲ.

ii) ವಿಷಯ : ಧರಣಿ ಕೂತಾಗ ಅಪ್ರೋಪ್ರಿಯೇಷನ್ ಮಂಸೂದೆ ಪಾಸ್ ಮಾಡಿದ್ದು ಮತ್ತು ರಾಜ್ಯಪಾಲರ ಬಗ್ಗೆ ಹೊರಡಿಸಿದ ಶ್ವೇತ ಪತ್ರದ ಕುರಿತು.

ಶ್ರೀ ವೈ ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ನಾನು ಎರಡು ಪ್ರಸ್ತಾವನೆಗಳನ್ನು ಮಂಡನೆ ಮಾಡುವುದಕ್ಕೆ ತಮ್ಮ ಅಪ್ಪಣೆ ಕೋರುತ್ತೇನೆ. ಮೊದಲನೆಯದಾಗಿ ಕಳೆದ ಶುಕ್ರವಾರ ಅಂದರೆ ೨೩ನೇ ತಾರೀಖು ಇಲ್ಲಿ ಏನು ಒಂದು ಘಟನೆ ನಡೆಯಿತು. ಆದರ ಪ್ರಸ್ತಾವಕ್ಕೆ ನಾನು ಹೋಗುವುದಿಲ್ಲ. ಈ ಸಂಬಂಧದಲ್ಲಿ ಈ ಸದನ ತೆಗೆದುಕೊಂಡ ನಿರ್ಣಯಕ್ಕೂ ಕೂಡ ನಾನು ಹೋಗುವುದಿಲ್ಲ. ಈ ವಿಚಾರದಲ್ಲಿ ತಾವು ಏನು ಆಜ್ಞೆ ಮಾಡಿದ್ದೀರಿ, ಅದನ್ನೂ ಕೂಡ ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಒಂದನ್ನು ಮಾತ್ರ ನಾನು ಪ್ರಸ್ತಾವನೆ ಮಾಡಬೇಕಾಗಿದೆ. ಅದೇನೆಂದರೆ, ವಿರೋಧಪಕ್ಷದ ೫೨ ಮಂದಿ ಸದಸ್ಯರು ತಮ್ಮ ಸ್ಥಾನ ಬಿಟ್ಟು ಇಲ್ಲಿ ಧರಣಿ ಕೂತ ಸಂದರ್ಭವನ್ನು ನೋಡಿ ಸರ್ಕಾರದವರು ೨೭೦೦ ಕೋಟಿ ರೂಪಾಯಿಗಳ ಅಪ್ರೋಪ್ರಿಯೇಷನ್ ಬಿಲ್ಲ್‌ನ್ನು ಮಂಡನೆ ಮಾಡಿದ್ದು ಕ್ರಮಬದ್ಧವಾಗಿದೆಯೇ ಎಂದು